## ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 392 (445) |
| ಸದಸ್ಯರ ಹೆಸರು | : | ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 30.01.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇಡೀ ವಿಶ್ವಕ್ಕೆ ಹಿಂದುಸ್ತಾನಿ ಸಂಗೀತದ ಇಂಪು ನೀಡಿದ ನಮ್ಮ ಹೆಮ್ಮೆಯ ಡಾ. ಗಂಗೂಬಾಯಿ ಹಾನಗಲ್ ಹುಟ್ಟಿದ ಧಾರವಾಡ ಮನೆ ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಧಾರವಾಡದಲ್ಲಿರುವ ಡಾ. ಗಂಗೂಬಾಯಿ ಹಾನಗಲ್ ಅವರು ಹುಟ್ಟಿ ಬೆಳೆದ ಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ನವೀಕರಿಸಿ ಸಂಗೀತ ಆಸಕ್ತರ ಹಾಗೂ ಯುವ ಕಲಾವಿದರಿಗೆ ಸ್ಫೂರ್ತಿಯ ಕುರುಹು ಆಗಿ ಮಾಡಲು ಕರ್ನಾಟಕ ಸರ್ಕಾರ ಕಾಳಜಿಪೂರ್ವಕವಾಗಿ ಅವರ ಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ನವೀಕರಿಸಲು ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ/192/ಕಸಧ /2007 ದಿನಾಂಕ: 28.06.2007 ರಲ್ಲಿ ರೂ.25.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>ಬಿಡುಗಡೆ ಮಾಡಿರುವ ಅನುದಾನದಲ್ಲಿ ರೂ.10.00 ಲಕ್ಷಗಳಲ್ಲಿ ಡಾ. ಗಂಗೂಬಾಯಿ ಹಾನಗಲ್ ಅವರ ಮನೆಯನ್ನು ಖರೀದಿ ಮಾಡಲಾಗಿರುತ್ತದೆ.<br><br>ಡಾ. ಗಂಗೂಬಾಯಿ ಹಾನಗಲ್ ಅವರ ಮನೆಯನ್ನು ಖರೀದಿಸಿದ ನಂತರ ರೂ. 15.00 ಲಕ್ಷಗಳ ಅನುದಾನದಲ್ಲಿ ಮನೆಯನ್ನು ನವೀಕರಣಗೊಳಿಸಿ, ವಸ್ತುಸಂಗ್ರಹಾಲಯವಾಗಿ ಸಿದ್ಧಗೊಳಿಸಲಾಗಿರುತ್ತದೆ. ಸದರಿ ವಸ್ತುಸಂಗ್ರಹಾಲಯವನ್ನು ದಿನಾಂಕ:23.09.2008 ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ಉದ್ಘಾಟನೆ ಮಾಡಿರುತ್ತಾರೆ.<br><br>ಜಿಲ್ಲಾಡಳಿತ, ಧಾರವಾಡ ಇವರ ಮಾಲೀಕತ್ವಕ್ಕೆ ಒಳಪಟ್ಟ ಈ ವಸ್ತು ಸಂಗ್ರಹಾಲಯವನ್ನು ಜಿಲ್ಲಾಡಳಿತವು ಮನೆಯ ನಿರ್ವಹಣೆಯ ಒಪ್ಪಂದದ ಮೇರೆಗೆ ಶ್ರೀ ಮನೋಜ ಹಾನಗಲ್ ಮ್ಯೂಸಿಕ್ ಫೌಂಡೇಷನ್, ಹುಬ್ಬಳ್ಳಿ ಇವರಿಗೆ ದಿನಾಂಕ:05.03.2008 ರಂದು ಹಸ್ತಾಂತರಿಸಲಾಗಿರುತ್ತದೆ.<br><br>ಒಪ್ಪಂದದಂತೆ, ಶ್ರೀ ಮನೋಜ್ ಹಾನಗಲ್ ರವರು ಡಾ. ಗಂಗೂಬಾಯಿ ಹಾನಗಲ್ ಅವರ ಮನೆ/ ವಸ್ತುಸಂಗ್ರಹಾಲಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದರು. ಶ್ರೀಯುತರು 2019ರಲ್ಲಿ ನಿಧನರಾಗಿರುವುದು ತಿಳಿದುಬಂದಿರುತ್ತದೆ.<br><br>ಈ ವಸ್ತು ಸಂಗ್ರಹಾಲಯವನ್ನು ಸುಸ್ಥಿತಿಯಲ್ಲಿ ಇಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿರುತ್ತದೆ. |
| ಆ) | 2007ರಲ್ಲಿ ಕರ್ನಾಟಕ ಸರ್ಕಾರ ಆ ಮನೆಯನ್ನು ಖರೀದಿ ಮಾಡಿ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಿ, ಈಗ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ) | ಮನೆ ತುಂಬೆಲ್ಲ ಜೇಡರ ಬಲೆ, ಹಾವು-ಚೇಳು, ಬೀದಿ ನಾಯಿಗಳು, ಮುರಿದು ಬಿದ್ದ ನಾಮಫಲಕ (ಬೋರ್ಡ್) ಇದೆಲ್ಲಾ ತುಂಬಿರುವ ಖ್ಯಾತ ಸಂಗೀತಗಾರ್ತಿ ಹುಟ್ಟಿದ ಮನೆಗೆ ಪುನರುಜ್ಜೀವನ ಮಾಡಲಾಗುವುದೇ; | |
| ಈ) | ಈ ವಸ್ತು ಸಂಗ್ರಹಾಲಯವನ್ನು ತಕ್ಷಣವೇ ದುರಸ್ಥಿಗೊಳಿಸಿ ಸಾರ್ವಜನಿಕರಿಗೆ ಮತ್ತು ಡಾ. ಗಂಗೂಬಾಯಿ ಹಾನಗಲ್ ಅಭಿಮಾನಿಗಳಿಗೆ ಅವರು ಹುಟ್ಟಿದ ಮನೆ ನೋಡಿ ಸಂತೋಷ ಪಡಲು ಬೇಕಾದ ಯಾವ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು? | |

ಸಂಖ್ಯೆ: ಕಸಂವಾ 18 ಕವಿಸ 2026

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು